## **ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿಗಳ ನ್ಯಾಯಾಲಯದಲ್ಲಿ ಗುಬ್ಬಿ**

**ಉಪಸ್ಥಿತರುಃ** ಶ್ರೀ ಮಹದೇವಪ್ಪ ಹೆಚ್. ಬಿ.ಎ.ಎಲ್.ಎಲ್.ಬಿ
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಗುಬ್ಬಿ

ದಿನಾಂಕಃ 20ನೇ ಫೆಬ್ರವರಿ ಮಾಹೇ 2017

**ಮೂಲ ದಾವಾ ನಂ. 12/2014**

ವಾದಿಗಳು ಃ ಎ.ಪಿ. ಮಂಜುನಾಥ ಮತ್ತು ಇತರರು

**-ವಿರುದ್ಧ-**

ಪ್ರತಿವಾದಿಗಳು ಃ ಇಂದ್ರಮ್ಮ ಮತ್ತು ಇತರರು

***ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11(ಡಿ) ರ ಅಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ 10ರ ಮೇಲೆ ಮಾಡಲಾದ ಆದೇಶ***

ಈ ಅರ್ಜಿಯನ್ನು 1ನೇ ಪ್ರತಿವಾದಿಯು ಸಲ್ಲಿಸಿ ವಾದಪತ್ರ ತಿರಸ್ಕರಿಸಲು ಕೋರಿರುತ್ತಾರೆ.

2. ಅರ್ಜಿದಾರರು - 1ನೇ ಪ್ರತಿವಾದಿಯಿಂದ ವಿಶೇಷ ಮೊಕ್ತಿಯಾರನಾಮೆ ಪಡೆದಿರುವ ಅರ್ಜಿದಾರರು ಈ ಅರ್ಜಿಯನ್ನು ಸಲ್ಲಿಸಿ ತಮ್ಮ ಪ್ರಮಾಣಪತ್ರದಲ್ಲಿ ಗಂಗಯ್ಯ ಎನ್ನುವವರಿಗೆ 1. ಎ.ಜಿ. ಸಿದ್ದಲಿಂಗಪ್ಪ, 2. ಗಂಗಮ್ಮ 3. ಎ.ಜಿ. ಪ್ರಕಾಶ್ ಮತ್ತು 4. ಎ.ಜಿ. ಪರಮೇಶ್ವರಯ್ಯ ಎನ್ನುವ 4 ಜನ ಮಕ್ಕಳಿದ್ದು, ಎ.ಜಿ. ಸಿದ್ಧಲಿಂಗಪ್ಪರವರು ದಿಃ19-08-2013 ರಂದು 1ನೇ ಪ್ರತಿವಾದಿಯನ್ನು ಬಿಟ್ಟು ಮರಣಹೊಂದಿರುತ್ತಾರೆ. ದಾವಾ ಆಸ್ತಿಗಳು ಮೃತ ಗಂಗಯ್ಯರವರ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. ಎ.ಜಿ. ಸಿದ್ದಲಿಂಗಪ್ಪ ಬಿನ್ ಗಂಗಣ್ಣ ಮತ್ತು ಆತನ ಸಹೋದರರು ಮತ್ತು ಸಹೋದರಿ ಸೇರಿ ದಿಃ10-11-1982 ರಂದು ಪಂಚಾಯತ್ ಪಾಲುಪಟ್ಟಿಯ ಮೂಲಕ ದಾವಾ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ. ಸದರಿ ಪಂಚಾಯತ್ ಪಾಲುವಿಭಾಗ ಪತ್ರಕ್ಕೆ ಗಂಗಣ್ಣನ ಮಗಳು ಮತ್ತು ಗಂಡುಮಕ್ಕಳು ಸಹಿ ಮಾಡಿರುತ್ತಾರೆ. ಸದರಿ ಪಂಚಾಯತ್ ಪಾಲುವಿಭಾಗ ಪತ್ರ ಆದ ನತಂರ 1ನೇ ಪ್ರತಿವಾದಿಯ ಗಂಡ ಮತ್ತು ಆತನ ಸಹೋದರರು ಬೇರೆ-ಬೇರೆಯಾಗಿ ವಾಸವಾಗಿರುತ್ತಾರೆ. ಸದರಿ ಪಂಚಾಯತ್ ಪಾಲುಪಟ್ಟಿಯಂತೆ ಎಂ.ಆರ್. ನಂ. 1/1993-94 ರ ರೀತ್ಯಾ ಸದರಿಯವರುಗಳ

ಹೆಸರಿಗೆ ಖಾತೆಪಹಣಿಗಳಾಗಿರುತ್ತವೆ. ಆದ್ದರಿಂದ ಈ ದಾವೆಗೆ ಕಾಲಮಿತಿ ಇರುವುದಿಲ್ಲ, ಆದ್ದರಿಂದ ಈ ಅರ್ಜಿಯನ್ನು ಪುರಸ್ಕರಿಸುವ ಮೂಲಕ ವಾದಪತ್ರವನ್ನು ತಿರಸ್ಕರಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

3. ವಾದಿ ಪರ ವಕೀಲರು ಈ ಅರ್ಜಿಗೆ ತಕರಾರನ್ನು ಸಲ್ಲಿಸಿದ್ದು, ತಮ್ಮ ತಕರಾರಿನಲ್ಲಿ ಈ ದಾವೆಯು ಕಾನೂನಿನ ಅಡಿಯಲ್ಲಿ ಊರ್ಜಿತವಾಗತಕ್ಕದ್ದಲ್ಲ, ವಾದಿಗಳು ತಮ್ಮ ವಾದಪತ್ರದ ಪ್ಯಾರಾ ನಂ. 3 ಮತ್ತು 4 ರಲ್ಲಿ 1ನೇ ಪ್ರತಿವಾದಿಯ ಗಂಡ ಹಾಗೂ 3ನೇ ಪ್ರತಿವಾದಿ ಸೇರಿಕೊಂಡು ದಾಖಲೆಗಳನ್ನು ಸೃಷ್ಠಿಸಿಕೊಂಡಿರುತ್ತಾರೆಂದು ತಿಳಿಸಿದ್ದು ಇರುತ್ತದೆ. ಸದರಿ ಸೃಷ್ಠಿಸಿಕೊಂಡ ದಾಖಲೆಯಂತೆ ಕಂದಾಯ ದಾಖಲೆಗಳನ್ನು ಬದಲಾಯಿಸಿಕೊಂಡಿರುತ್ತಾರೆ. ಈ ವಿಚಾರ ಇತ್ತೀಚೆಗೆ ವಾದಿಗಳಿಗೆ ತಿಳಿದು ಬಂದಿರುತ್ತದೆ. ಆದ್ದರಿಂದ ಈ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

4. ಈ ಕೆಳಗಿನ ಅಂಶಗಳು ನ್ಯಾಯಾಲಯದ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶಗಳು**

1. ಅರ್ಜಿದಾರರು - 1ನೇ ಪ್ರತಿವಾದಿಯು ಅರ್ಜಿಯಲ್ಲಿ ಕೋರಿಕೊಂಡಿರುವ ಪರಿಹಾರಗಳನ್ನು ಪಡೆದುಕೊಳ್ಳಲು ಅರ್ಹರು ಇರುತ್ತಾರೆಯೇ?
2. ಯಾವ ಆದೇಶ?

5. ವಾದಿ ಮತ್ತು ಪ್ರತಿವಾದಿಯ ಪರ ವಕೀಲರ ವಾದ ಮತ್ತು ಪ್ರತಿವಾದವನ್ನು ಆಲಿಸಲಾಯಿತು.

6. ಈ ಮೇಲಿನ ಅಂಶಗಳಿಗೆ ನ್ಯಾಯಾಲಯದ ಉತ್ತರ ಈ ಕೆಳಗಿನಂತಿರುತ್ತದೆ.

ಅಂಶ ನಂ.1 ಃ ನಕಾರಾತ್ಮಕವಾಗಿ

ಅಂಶ ನಂ.2 ಃ ಮಾಡಲಾದ ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿ

**-ಃ ಕಾರಣಗಳು ಃ-**

7. **ಅಂಶ ನಂ.1** ಃ- ವಾದಿಯು ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ದಾವಾ ಆಸ್ತಿಗಳಲ್ಲಿ ಪಾಲುವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಕೋರಿ ಸಲ್ಲಿಸಿರುತ್ತಾರೆ. ವಾದಿಯು ತನ್ನ ವಾದಪತ್ರದಲ್ಲಿಯ ಪ್ಯಾರಾ ನಂ. 3 ರಲ್ಲಿ 1ನೇ ಪ್ರತಿವಾದಿಯು 3ನೇ ಪ್ರತಿವಾದಿಯೊಂದಿಗೆ

ಸೇರಿಕೊಂಡು ದಾಖಲೆಗಳನ್ನು ಸೃಷ್ಟಿಸಿಕೊಂಡು ತಮ್ಮ ಹೆಸರಿಗೆ ಖಾತೆ ಪಹಣಿಗಳನ್ನು ಮಾಡಿಕೊಂಡಿರುತ್ತಾರೆಂದು ತಿಳಿಸಿದ್ದು ಇರುತ್ತದೆ ಮತ್ತು ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆಂದು ತಮ್ಮ ವಾದಪತ್ರದಲ್ಲಿ ತಿಳಿಸಿದ್ದು ಇರುತ್ತದೆ. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ದಿಃ10-11-1982 ರಂದು ಪಂಚಾಯತ್ ಪಾಲುವಿಭಾಗ ಪತ್ರದ ಮೂಲಕ ಸಿದ್ದಲಿಂಗಪ್ಪ ಮತ್ತು ಆತನ ಸಹೋದರ ಹಾಗೂ ಸಹೋದರಿಯವರು ವಿಭಾಗ ಮಾಡಿಕೊಂಡಿದ್ದು, ಸದರಿ ವಿಭಾಗದಂತೆ ಎಂ.ಆರ್. ನಂ. 1/1993-94 ರಂತೆ ಖಾತೆ ಪಹಣಿಗಳು ಆಗಿರುತ್ತವೆಂದು ತಿಳಿಸಿದ್ದು, ವಾದಿಗಳು ತಮ್ಮ ವಾದಪತ್ರದಲ್ಲಿ 1ನೇ ಪ್ರತಿವಾದಿ ಹಾಗೂ 3ನೇ ಪ್ರತಿವಾದಿ ಸೇರಿಕೊಂಡು ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆಂದು ತಿಳಿಸಿರುವುದರಿಂದ ಈ ದಾವೆಯಲ್ಲಿ ವಿಚಾರಣೆಯ ಅವಶ್ಯಕತೆ ಇರುತ್ತದೆಂದು ನ್ಯಾಯಾಲಯಕ್ಕೆ ಕಂಡುಬರುತ್ತದೆ. ಪ್ರತಿವಾದಿ 1 ರವರ ಪರ ವಕೀಲರು ನ್ಯಾಯಾಲಯದ ಮುಂದೆ ಧೃಡೀಕೃತ ಅಡಮಾನ ಪತ್ರಗಳು, ಕಲ್ಪತರು ಗ್ರಾಮೀಣ ಬ್ಯಾಂಕ್ ಹೊಸಕೆರೆ ಬ್ರಾಂಚ್‌ನ ದಾಖಲೆ, ಋಣಭಾರ ಪ್ರಮಾಣಪತ್ರಗಳನ್ನು ಹಾಜರುಪಡಿಸುವ ಮೂಲಕ ದಾವಾ ಆಸ್ತಿಗಳಲ್ಲಿ ಪಂಚಾಯತ್ ಪಾಲುವಿಭಾಗದ ಮೂಲಕ ಅವರವರ ಹೆಸರಿಗೆ ಖಾತೆಯಾದ ನಂತರ ಕೆಲವೊಂದು ಆಸ್ತಿಗಳನ್ನು ಮಾರಾಟವನ್ನೂ ಸಹ ಮಾಡಲಾಗಿರುತ್ತದೆ ಎಂದು ತಿಳಿಸಿದ್ದು, ಸದರಿ ದಾಖಲೆಗಳ ಬಗ್ಗೆಯೂ ಸಹ ಈ ದಾವೆಯಲ್ಲಿ ವಿಚಾರಣೆಯ ಅವಶ್ಯಕತೆ ಇರುತ್ತದೆಂದು ನ್ಯಾಯಾಲಯಕ್ಕೆ ಕಂಡುಬರುತ್ತದೆ.

8. ನ್ಯಾಯಾಲಯವು CPC-1908 Order 7 Rule 11- <u>Rejection of Plaint</u>- The plaint shall be rejected in the following cases (a) Whether it does not disclose a cause of action (b) Whether the relief claimed is under valued, and the plaintiff, on being required by the Court to so correct the valuation within a time to be fised by the Court, fails to do so; (c) Where the relief claimed is properly valued, but the plaint is written upon paper insufficient stamped, and the plaintiff , on being required by the Court to supply the requisite stamp-paper within a time to be fixed by the court, fails to do so;

(d) Where the suit appears from the statement in the plaint to be bared by any law; (e) Where it is not filed in duplicate (f) Where the plaintiff fails to comply with the provisions of rule9 - Provided that the time fixed by the Court fro the correction of the valuation or supplying of the requisite stamp-papers shall not be extended unless the court, for reasons to be recorded, is satisfied that the plaintiff was prevented by any cause of an exceptional nature from correcting the valuation or supplying the requisite stamp-paper, as the case may be, within the time fised by the court and that refusal to extend such time would cause grave injustice to the plaintiff. ಎಂದು ಇರುತ್ತದೆ.

9. ಈ ಮೇಲಿನ ಸಿ.ಪಿ.ಸಿ. ಆದೇಶ 7 ನಿಯಮ 11(ಡಿ) ರಲ್ಲಿರುವ ಕಾನೂನ್ನು ಹಾಗೂ ಈ ದಾವೆಯ ವಸ್ತುವಿಷಯ ಮತ್ತು ಸ್ವರೂಪವನ್ನು ನ್ಯಾಯಾಲಯವು ಪರಿಶೀಲಿಸಿದಾಗ ಮತ್ತು ನ್ಯಾಯಾಲಯವು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪುಗಳು CPC - 1908 U/o 7 Rule 11(D) – Plaint – Rejection of – for rejection, the suit must be show to be borred by law 2. ILR 2014 Kar 1619 Mewaram R. Shah and others V/s Bhawar Lal and anothers –CPC 1908- Order 7 Rule 11(D) the awarements made in the plaint as hole have to be seen to find out whether clause (D) of rule 11 of Order 7 is applicable. It is not permissible to cull out a sentence or a passage and to read it out of the contest in isolation. 3. ILR 2013 KAR 1171 Gokualdas images Pvt. Ltd. V/s Axis bank Ltd. Ahamadabad – CPC -1908 – Order 7 Rule 11(D) – in the instant case,

regrettably the learned trial has sat judgment over the merit of the plaintiff case and the defence of the respondent/bank against such claim. Such approach the learned trial judge is nothing but pre-judging the issue which require enquiry as provided by the CPC – to decide whether " cause of action " was their the plaintiff was file the suit, or whether the suit claim was bared by law , the learned trial judge has not noticed the mandate of order 7 Rule(D) of CPC ನ್ಯಾಯಾಲಯವು ಈ ಮೇಲಿನ ತೀರ್ಪುಗಳಲ್ಲಿ ತಿಳಿಸಿರುವಂತೆ ಕೇವಲ ವಾದಪತ್ರವನ್ನು ಓದುವುದರಿಂದ ಸದರಿ ದಾವೆಗೆ ಕಾಲಮಿತಿಯ ಭಾದಕ ಉಂಟಾಗಿರುತ್ತದೆಂದು ಕಂಡುಬಂದಾಗ ಮತ್ತು ವ್ಯಾಜ್ಯ ಕಾರಣ ಇರುವುದಿಲ್ಲವೆಂದು ಕಂಡುಬಂದಾಗ ಮಾತ್ರ ನ್ಯಾಯಾಲಯ ಅಂತಹ ಸಂದರ್ಭದಲ್ಲಿ ವಾದಪತ್ರವನ್ನು ತಿರಸ್ಕರಿಸಬಹುದಾಗಿರುತ್ತದೆ. ಈ ದಾವೆಯಲ್ಲಿ ವಾದಿಗಳು ದಾಖಲೆಗಳನ್ನು ಸೃಷ್ಠಿಸಿಕೊಂಡು ಖಾತೆ ಮಾಡಿಕೊಂಡಿರುತ್ತಾರೆಂದು ತಮ್ಮ ವಾದಪತ್ರದಲ್ಲಿ ತಿಳಿಸಿರುವುದರಿಂದ ಈ ದಾವೆಯಲ್ಲಿ ಪೂರ್ಣ ಪ್ರಮಾಣದ ವಿಚಾರಣೆಯ ಅವಶ್ಯಕತೆ ಇರುತ್ತದೆಂದು ಕಂಡುಬರುತ್ತದೆ. ಈ ಹಂತದಲ್ಲಿ 1ನೇ ಪ್ರತಿವಾದಿಯು ತಮ್ಮ ಅರ್ಜಿಯಲ್ಲಿ ಕೋರಿಕೊಂಡ ಪರಿಹಾರಗಳನ್ನು ಪಡೆದುಕೊಳ್ಳಲು ಯಾವುದೇ ಸಕಾರಣಗಳನ್ನು ನೀಡಿರುವುದಿಲ್ಲ, ಆದ್ದರಿಂದ ಅಂಶ ನಂ. 1 ಕ್ಕೆ ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

10. **ಅಂಶ ನಂ.2–** ಈ ಮೇಲಿನ ಅಂಶ ನಂ.1ರಲ್ಲಿ ಚರ್ಚಿಸಲಾದಂತೆ ಮಾಡಲಾದ ಆದೇಶ.

**ಆದೇಶ**

1ನೇ ಪ್ರತಿವಾದಿ ದಿವಾಣಿ ಪ್ರಕ್ರಿಯಾ ಸಂಹಿತೆ

ಕ್ರಮಾದೇಶ 7 ನಿಯಮ 11(ಡಿ) ರ ಅಡಿಯಲ್ಲಿ

ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 10 ನ್ನು ತಿರಸ್ಕರಿಸಲಾಗಿರುತ್ತದೆ.

ಖರ್ಚಿನ ಬಗ್ಗೆ ಯಾವುದೇ ಆದೇಶವಿಲ್ಲ.

**(ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಉಕ್ತಲೇಖನದ ರೀತ್ಯಾ ನೀಡಿ ಬೆರಳಚ್ಚು ಮಾಡಿಸಿ ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿಃ20-02-2017 ರಂದು ಉದ್ಘೋಷಿಸಲಾಯಿತು)**

**( ಮಹದೇವಪ್ಪ ಹೆಚ್. )**
ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಬ್ಬಿ .